ಜಾಹೀರಾತಿಗೆ ಉತ್ತಮ
ಪ್ರಚಾರ ಸಾಧನ ಸತ್ಯವಾದಿ
ವಿವರಗಳಿಗೆ:
ಕಚೇರಿಗೆ ಬರೆಯಿರಿ

Regd No M 1299 33 ನೇ ವರ್ಷ ತಾ॥ 4—1—50

ಸತ್ಯವಾದಿ
SATYAVADI

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

Protect the Cow
ಗೋರಕ್ಷಣೆ ನಡೆಯಲಿ
—
ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ

26 ರ ಒಳಗೆ ಆಂಧ್ರ ನಿರ್ಮಿಸಲು ಸಮಿತಿ ಶಿಫಾರಸು ಮಾಡಿದೆ

ದೇವಾಲಯದಲ್ಲಿ ಹರಿಜನರಿಂದ ಸ್ವತಃ ವಿಗ್ರಹಾರಾಧನೆ ಕೂಡದು

[ಸ್ವಂ. ಸು. ತಂತಿ]

ಮೊಡಾಸ, ಜ 3 — ಶೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸ್ವಾಮಿಗಳವರು ಬಯಾಡ್ಸ್‌ತವ್ಡಾ, ಧಾನ್ಸುರಾ ವತ್ತಿ ತರ ಸ್ಥಳಗಳಿಗೆ ಭೇಟಿ ಇತ್ತರು. ಅಲ್ಲೆಲ್ಲಾ ಸ್ವಜಂಡ ಸಭೆಗಳಲ್ಲಿ ಹಿಂದೂ ಕೋಡು ಮಸೂದೆಯ ಮತ್ತು ದೆಹಲಿ ಶಾಸನ ಸಭೆ ಮುಂದೆ ಹಿಂದೂಕೋಡು ಮಸೂದೆ ಶಾಂತಿಯುತ ಪ್ರತಿಭಟನಾ ಪ್ರದರ್ಶನ ವೇಲೆ ನಡೆಸಿದ ಲಾಠಿ ಪ್ರಹಾರ ವತ್ತು ಗೋರಕ್ಷಣೆಯನ್ನು ಪ್ರತಿಭಟಿಸುವ ಠರಾವುಗಳಾದವು ಹಿಂದೂ ಕೋಡು ಮಸೂದೆಯ ಪ್ರಾಚೀನ ಹಿಂದೂ ಸಂಸ್ಕೃತಿ ವತ್ತು ಪದ್ಧತಿಗಳಿಗೆ ಘಾತಕವಾ ರುವುದರಿಂದ ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಶ್ರೀ ಜಗದ್ಗುರುಗಳವರು ಸರ್ಕಾರವನ್ನು ಒತ್ತಾಯಪಡಿಸಿದರು. ಎಂಡಸೆಯಿಂದಾಗ ಹರಿಜನರಿಂ ಪ್ರವೇಶ ಮಸೂದೆಗೆ ತಿದ್ದುಪಡಿ ತೇಳಿ ದೇವಾಲಯಗಳಲ್ಲಿ ಹರಿಜನರು ಸ್ವತಃ ವಿಗ್ರಹಾರಾಧನೆ ಮಾಡುವ ಅಧಿಕಾರವೇ ಯುವ ಯೋಜನೆಯು ಶಂಕರ ಉಪಾಸನೆಯನ್ನೇ ತಲೆಕೆಳಕು ಮಾಡುವುದರಿಂದಲೂ ವತ್ತು ಭಾರತಾದ್ಯಂತ ಅಶಾಂತಿ ಮತ್ತು ಅಸೌಖ್ಯವನ್ನು ಉಂಟು ಮಾಡ ವುದರಿಂದಲೂ ತೀವ್ರವಾಗಿ ಪ್ರತಿಭಟಿಸುವರೆಂದರು. ಶ್ರೀ ಜಗದ್ಗುರುಗಳು ಇಲ್ಲಿ ಮೌಕ್ಕಾಂ ಮಾಡಿದವರು. ತಾರೀಖು 7 ನೇ ಶನಿವಾರ ಸನಾತನ ಧರ್ಮ ಸಂವರ್ಧನ ಶ್ರೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ಇಲ್ಲಿ ವೈಭವದಿಂದ ನಿಂವೇರುವುದು.

ನಿನ್ನೆ ದಿನ ಬೆಳಿಗ್ಗೆ ಕಲ್ಕತ್ತಾದ ಅಂಚೆ ಕಚೇರಿಯಲ್ಲಿ ಸಶಸ್ತ್ರ ಧಾಳಿಯಾ ದಿಂದ ದರೋಡೆ ಜರುಗಿ 53 ಸಹಸ್ರ ರೂ. ಅಪಹಾರವಾಗಿದೆ

ಸತ್ಕಾರ ಕೂಟ

ಶ್ರೀವಸ್ಮಹಾರಾಜರನ್ನು ಮೈಸೂರು ಚಾಮುಂಡಿ ಬೆಟ್ಟದಲ್ಲಿ ನಿನ್ನೆ ದಿವಸ ಸಂಜೆ ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಪ್ರತಿನಿಧಿಗಳ ಗೌರವಾರ್ಥ ಸತ್ಕಾರಕೂಟ ಏರ್ಪಾಟು ಮಾಡಿದ್ದರು. ಸತ್ಕಾರಕೂಟಕ್ಕೆ ಕೇಂದ್ರ ಸಚಿವ ಶ್ರೀ ಜಗಜೀವನರಾಂ, ಮೈಸೂರು ಸಚಿವರು ಇತರ ಗಣ್ಯ ವ್ಯಕ್ತಿಗಳು ಆಹ್ವಾನಿತರಾಗಿದ್ದರು ಐ ಎಲ್ ಓ ಗವನರಿಂಗ್ ಬಂಡಿ ಪ್ರತಿನಿಧಿಗಳನ್ನು ಪ್ರಭುಗಳಿಗೆ ಪರಿಚಯ ಮಾಡಿಸಲಾಯಿತು.

ವಿವಿಧ ವಿಷಯ

ಮೂರು ಸಹಸ್ರ ಕೋಟಿ ಡಾಲರು ಸಹಾಯವನ್ನು ಸಮರಾನಂತರ ವಿದೇಶಗಳಿಗೆ ಕೊಟ್ಟಿರುವುದಾಗಿ ಮೂಸ್ತೆ ಸಂಯುಕ್ತ ಸಂಸ್ಥಾನದ ವಾಣಿಜ್ಯ ಶಾಖೆ ಪ್ರಕಟಿಸಿರುವ ವರದಿ ವಾಷಿಂಗ್ಟನ್‌ನಿಂದ ಬಂದಿದೆ.

ಂ

ಕಮ್ಯುನಿಸ್ಟ್ ಪಕ್ಷದ ಮೇಲಿನ ತಿರುವಾಂಕೂರು — ಕೊಚ್ಚಿನ್ ಸರ್ಕಾರ ನಿಷೇಧ ಜಾರಿ ಮಾಡಿದೆ

ಂ ಂ

ಅಮೇರಿಕಾ ಚೀಣಾ ರಾಷ್ಟ್ರೀಯ ರಾಜ್ಯಕ್ಕೆ ಬೆಂಬಲಿಸುವುದಾಗಿಯೂ ಇನ್ನೊಂದು ವಾದಲ್ಲಿ ಕಮ್ಯುನಿಸ್ಟ್ ಚೀಣಕ್ಕೆ ಬ್ರಿಟಿಷ್ ಮನ್ನಣೆ ಕೊಡುವೆದೆ ದೂ ಲಂಡನ್ ವಾರ್ತೆ.

ಂ ಂ

ನಿನ್ನೆ ಮೈಸೂರು ಅಂವನೆಯಲ್ಲಿ ಅಂಧಕಾಸುರ ಸಂಹಾರ ಜರುಗಿತು

ಸುದ್ದಿಗಳು

ಕಂಟಿಸ್ಟ್ ಆಫ್ ಕೋರ್ಟ್ ಆರೋಪಣೆಯ ವೇಲೆ ಪಾಟಿಯಾಲ ಮತ್ತು ಪೂರ್ವ ಪಂಜಾಬ್ ಒಕ್ಕೂಟ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬ್ರಹ್ಮಾನಂದರವರಿಗೆ ರೂ 200 ದಂಡ ಅಥವ 1 ತಿಂಗಳ ಸಜೆ ವಿಧಿಸಲಾಯಿತಿದ ಪಾಟಿಯಾಲಾ ವಾದಿ.

ಂ ಂ

ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಕಾರ್ಮಿಕರ ಸಮಿತಿಗೆ ಶ್ರೀ ಕೆ. ಹನುಮಂತಯ್ಯನವರನ್ನು ನಾಮಕರಣ ಮಾಡಿರುವ ಸುದ್ದಿ ಬಂದಿದೆ.

ಂ ಂ

ಕಲ್ಪದಷ್ಟು ಮಣದಷ್ಟು ಧಾನ್ಯ ಸಂಚಾರಿ ಅನಾನುಕೂಲತೆಯಿಂದ ಪಾಟಿಯಾಲ ಮತ್ತು ಪೂರ್ವ ಪಂಜಾಬ್ ಒಕ್ಕೂಟದಲ್ಲಿ ಕೊಳೆಯುತ್ತಿದೆ

ಂ ಂ

ಸಧ್ಯದಲ್ಲೇ ಸ್ವಲ್ಪ ಬದಲಾವಣೆಗಳನ್ನು ಮಾಡಿ ಹೊಸ ಮಂತ್ರಿವಡಲಂಚಸವುದಾಗಿ ಶ್ರೀ ಕೆ. ಸಿ ರೆಡ್ಡಿ ಬೆಂಗಳೂರಿನಲ್ಲಿ ನಿನ್ನೆ ಸುದ್ದಿಗಾರರಿಗೆ ತಿಳಿಸಿದರು.

ಂ ಂ

ಭಾರತ ಪಾರ್ಲಿಮೆಂಟಿಗೆ ಮೈಸೂರು ಸಂಸ್ಥಾನದಿಂದ ಆಯ್ಕೆಯಾಗಬೇಕಾದುದು 7 ಮಂದಿ ಮಾತ್ರ ಆದರೆ ಪಾಲಿಮೆಂಟರಿ ಸಭೆಗೆ 120 ಅರ್ಜಿಗಳು ಬಂದಿರುವ ವರದಿ ಬೆಂಗಳೂರಿನಿಂದ ಬಂದಿದೆ

ಂ ಂ

ಮೈಸೂರು ಪೌರಸಭೆ ಅಧ್ಯಕ್ಷ ಆಯ್ಕೆ ಆಗುವ ವರೆಗೆ ಮೈಸೂರು ಜಿಲ್ಲಾಧಿಕಾರಿಗಳೇ ಪೌರಾಧ್ಯಕ್ಷರು

ಚುನಾವಣೆ

ಜನವರಿ ತಾ॥ 19 ರಂದು 4 ಗಂಟೆಗೆ ಮೈಸೂರು ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆ ಜರುಗುವುದು.

ವಿದೇಶ, ಜ 5 : ಆಂಧ್ರವಾಸ್ತವ್ಯ ತಡವಾಡಿದೆ ರಚನೆಯಾಗಬೇಕು ಅಂಬ ಒಕ್ಕೂರಿನ ಅಪೇಕ್ಷೆ ಅಲ್ಲದೆ ಆಡಳಿತ ಹಿತದೃಷ್ಟಿಯಿಂದ ಅಗತ್ಯ ಎಂದು ನಿನ್ನೆ ರಾತ್ರಿ ಸಿದ್ಧಪಡಿಸಿದ ವರದಿಯಲ್ಲಿ ತಿಳಿಸಿದೆ ಸ್ವಾತಂತ್ರ್ಯ ರಚನೆ 26 ರೊಳಗೆ ಆಗಬೇಕೆಂದು ಭಾರತ ಸರ್ಕಾರಕ್ಕೆ ಸಮಿತಿ ಶಿಫಾರಸು ಮಾಡಿದೆ

ಸಾದರ ಸ್ವೀಕಾರ

ಮೈಸೂರು ಸೇವಾರಾಜ ನಾರ್ಕಟ್ ನಲ್ಲಿರುವ ಸುಪ್ರಸಿದ್ಧ ಶ್ರೀ ಚಾಮುಲಕ್ಷ್ಮಿ ಬ್ಯಾಂಗಲ್ ಸ್ಟೋರ್ಸಿನವರು ಕಳಿಸಿರುವ ಸುಂದರವಾದ ವರ್ಣರಂಜಿತ ಕ್ಯಾಲೆಂಡರ್‌ನ್ನು ಸಾದರದಿಂದ ಸ್ವೀಕರಿಸಿದ್ದೇವೆ

ಮೊನ್ನೆ ದಿವಸ ಹೊಸಮೊಗರ್ದದ ಆರ್ಲಳಿಯಲ್ಲಿ ಒಬ್ಬಾಕೆ ಎಂಟು ಗಂಡು ಮತ್ತು ಒಂದು ಹೆಣ್ಣು ಮಗುವನ್ನು ಪ್ರಸವಿಸಿದಳು

ಂ ಂ

ನಿನ್ನೆ ಈಜಿಪ್ಟಿನಲ್ಲಿ ಸುಮಾರು 50 ಲಕ್ಷ ವಂದಿ ಮತದಾರರು ಮಹಾ ಚುನಾವಣೆಯಲ್ಲಿ ಮತದಾನ ಮಾಡಿದರು

ಂ ಂ

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗಳಿಗೆ ಬರಬೇಕೆಂದು ಇದುವರೆಗೆ ಸಚಿವರಿಗೆ ಆಹ್ವಾನ ಕಳಿಸಲಾಗುತ್ತಿತ್ತು ಇನ್ನು ಮುಂದೆ ಸಚಿವರನ್ನು ಸಭೆಗೆ ಸೇರಿಸುವುದಿಲ್ಲವಂತೆ! ಕಾರ್ಯಕಾರಿ ಸಮಿತಿ ಸದಸ್ಯರು ಮಾತ್ರ ಆಹ್ವಾನಿತರಂಗವಂತೆ ಹೀಗೆಂದು ಕಾಂಗ್ರೆಸ್ ನಿರ್ಧರಿಸಿದೆ ಎಂದು ಬೆಂಗಳೂರು ವರದಿ

ಕಾಶ್ಮೀರ

ಪಾಕಿಸ್ತಾನ ಸೂತ್ರಗಳಿಗೆ ಪಕ್ಷಗಳು ಒಪ್ಪಲಿಲ್ಲವಾಗಿ ಕಾಶ್ಮೀರ ಸಮಸ್ಯೆ ಪುನಃ ಪಶ್ವಸುಸ್ಥೆಗೆ ಹೋಗುವ ಸೂಚನೆ ಇದೆಯೆಂದು ನ್ಯೂಯಾರ್ಕ್ ವಾರ್ತೆ ತಿಳಿಸುವುದು

ಕಾಲ್ನಡಿಗೆಯಿಂದ

ಪೌರ್ವ ಆಸ್ಯದ ಸಂಚಾರ

ಟರ್ಕ ಮದ್ರಾಸು ತರುಣನ ಸಾಹಸ

ಸಾಹಸ ನಡೆಸಬೇಕೆಂದು ಸ್ಫೂರ್ತಿಯುಂಟಾಗಿ ವಿದ್ಯಾಸಿನ ಶ್ರೀ ಡಿ ಕೆ. ರಾಜಗೋಪಾಲನೆಂಬ 36 ವರ್ಷದ ತರುಣನು 1935 ನೇ ಫೆಬ್ರವರಿ ತಾ || 11 ರಂದು ಟ್ಯೂಟಿಕೊರಿನ್ನಿನಿಂದ ಕಾಲ್ನಡಿಗೆಯಿಂದಲೇ ಸಿಂಹಳ, ತಿಬೇಟು, ಬರ್ಮಾ, ಚೀನಾ ವಗೈರೆ ದೇಶಗಳ ಸಂಚಾರ ಮುಗಿಸಿ ಅತ ಮದರಾಸಿಗೆ ಮರಳಿದ್ದಾನೆ.

ರಾಜಗೋಪಾಲನು ಸು.ಮಾರು 28202 ಮೈಲಿಗಳ ಪಯಣವನ್ನು ಮುಗಿಸಿದುದು ನಿಜವಾಗಿಯೂ ದೊಡ್ಡ ಸಾಹಸವೇ. ಡ್ಯಾನಿಯಲ್ ಡೆಫೋ ಬರೆದಂತಾ ಬಿಕ್ಕಟ್ಟು ಕೂಸೋ ಓದಿದನಂತರ ಇಂತಹ ಸಾಹಸಕ್ಕೆ ಕೈ ಹಚ್ಚುವ ಆಸಕ್ತಿ ತನ್ನಲ್ಲುಂಟಾದುದೆನ್ನುತ್ತಾನೆ.

ಒಂದು ಕಹಿ ಅನುಭವ

ಸಿಂಹಳದ ಅತಿ ದೊಡ್ಡ ಅರಣ್ಯವಾದ ಯಾಲಾವನ್ನು ದಾಟಿದವರಲ್ಲಿ ರಾಜಗೋಪಾಲನೇ ಮೊದಲನೆಯವನು. ಯಾಲಾ ಗೇವು ಸೆಂಕ್ಚುವರಿ ಬಳಿ ಇವನು ತಲಪಿದಾಗ ರಾತ್ರಿ ಕೊರೆಯುವ ಚಳಿ. ಇವನನ್ನು ಸಂಧಿಸಿತು ಅದರ ಬಾಯಿಂದ ತಪ್ಪಿಸಲು ಓಡುವಾಗ ಎದುರಿಗೆ ಬಂದು ವರಿಷ್ಕಲು ಅದರ ಕೊಂಬಿನ ಸ್ಪರ್ಶದ ಗೋಪಾಲ ಕೋಣದ ಬಾಯಿಂದ ತಪ್ಪಿಸುವಾಗ ಬಂದ ಮೇಲೆ ದೊಡ್ಡ ಚಿಂತೆಯೊಂದು ಬಾಯ್ತೆರೆದು ನಿಂತಿದ್ದನ್ನು ಕಂಡು ಬೆಚ್ಚಿಬಿದ್ದ. ಇವನನ್ನು ನೋಡಿ ಒಂದು ಗರ್ಜನೆ ಕೊಟ್ಟಿತು; ರಾಜಗೋಪಾಲನಿಗೆ ಬಂದ ಕೋಪದಿಂದ ಕಾಲು ಜಪ್ಪಿತು. ದೊಪ್ಪನೆ ಕೆಳಕ್ಕೆ ಬಿದ್ದ ಅಲ್ಲಿ ಸುಮಾರು ಒಂದು ನಿಮಿಷ ಪ್ರಜ್ಞಾಶೂನ್ಯನಾಗಿ ಬಿದ್ದುಕೊಂಡಿದ್ದನಂತೆ. ಸ್ಮೃತಿ ಬಂದು ಕಣ್ಣಿರೆಯುವಾಗ ಯಮಸ್ವರೂಪಿ ದುಷ್ಟ ಜಂತುಗಳು ಒಂದಿನ್ನೊಂದರೊಡನೆ ಜೀವನ್ಮರಣ ಹೋರಾಟದಲ್ಲಿ ನಿರತವಾದ ಅಪೂರ್ವ ನೋಟ ಅವನಿಗೆ ಕಾಣಲು ಸಿಕ್ಕಿತು. ಆ ಕಾದಾಟದಲ್ಲಿ ಕಾಡು ಕೋಣನಿಗೆ ಜಯವಾಯಿತಂತೆ.

ಬರ್ಮಾದಲ್ಲಿ

ಬರ್ಮಾದಲ್ಲಿಯ ತನ್ನ ಅನುಭವಗಳನ್ನು ವಿವರಿಸುತ್ತ ರಾಜಗೋಪಾಲನು 'ಆರಕಾನ್ ಯೋಮಪರ್ವತದಲ್ಲಿ ಕೆಲ ಮುಂದಿ ಗ್ರಾಮಸ್ಥರು ನನ್ನನ್ನು ಕಂಡೊಡನೆ ಭಯಗ್ರಸ್ತರಾಗಿ ಮನೆಗಳನ್ನು ಬಿಟ್ಟು ಓಡಿದರು. ಪ್ರಾಯಶಃ ನಾಗರೀಕತೆ ಹೊಂದಿದ ಮನುಷ್ಯನನ್ನು ಇವರು ನೋಡುವದು ಇದೇ ಮೊದಲ ಬಾರಿಯಾಗಿರಬೇಕು' ಎಂದಿರುವನು (ಪ್ರ)

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಪರಸ್ಥಳಕ್ಕೆ ಅಂಚೆಸಮೇತ 12 ಆಣೆ

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ ಉದಾತ್ತಾಶ್ರಯದಲ್ಲಿ ಪ್ರಕಟವಾಗುವ 'ಪ್ರಬೋಧ' ಧಾರ್ಮಿಕ ಸಪ್ತಾಹಿಕ ವನ್ನೊಳಗೊಂಡಿದೆ

ವಾರ್ಷಿಕಚಂದಾ ಪರಸ್ಥಳಕ್ಕೆ
ಅಂಚೆಸಮೇತ 7-14-0

Edited, Printed and Published by M. S. Krishna Rao, at the Satyavadi Press, Chamarajapuram Mysore

ವುಡ್ ಲ್ಯಾಂಡ್ಸ್

SHEHNAI

ಷೆಹನಾಯ್

ರೆಹನಾ — ಇಂದುಮತಿ
ಮಮ್ತಾಜ್ ಅಲಿ, ವಿ ಹೆಚ್ ದೇಸಾಯ್
ಸಾತ್ರನಹಿಸಿರುವ
ಮೊದಲಿನಿಂದ ಕಡೆಯವರೆಗೂ
ಆಹ್ಲಾದಕರವಾದ ಹಿಂದಿ ಚಿತ್ರ
ಪ್ರತಿ ದಿನ 3 ಆಟಗಳು

ರಣಜಿತ್ — ಅಂದಾಜ್

ನರ್ಗಿಸ್ ದಿಲೀಪಕುಮಾರ್.
ರಾಜಕಪೂರ್ ಸಾತ್ರನಹಿಸಿರುವ
ಮನೋಹರ ಹಿಂದಿ ಚಿತ್ರ
ಕಿಕ್ಕಿರಿದ ಜನಸಂದಣಿಯಿಂದ
ಕೂಡಿದ
2 ನೇ ವಾರ
ANDAZ
ಪ್ರತಿ ದಿನ 3 ಆಟಗಳು

ಅಪೇರಾ — 5-1-50 ರಿಂದ

ಹೊನ್ನಪ್ಪ ಭಾಗವತರ್, ಭಾನುಮತಿ, ಸರೋಜ, ಲಲಿತ, ಪದ್ಮಿನಿಯವರ
ಅಮೋಘ ಅಭಿನಯದಿಂದ ಕೂಡಿದ
ದೇವಮನೋಹರಿ
(ಮಹೋನ್ನತ ಶಿವಲೀಲಾ ಚಿತ್ರ)
ಪ್ರತಿ ದಿನ 3 ಆಟಗಳು